ಸಾಕ್ಷಿಯನ್ನು ದಿಃ26-04-2016 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.

<u>ಪಾಟೀ ಸವಾಲುಃ</u> ಶ್ರೀ ಎಮ್ ಎಸ್ ಬಿ ವಕೀಲರಿಂದ ವಾದಿಯ ಪರವಾಗಿಃ

ಈ ದಾವೆವಳಗೆ ಇರುವಂತಹ ದಾವಾ ಆಸ್ತಿಗಳಿಗೆ ನಾನು ಆಧರಿಸುವ ಮೃತ್ಯು ಪತ್ರದ ಪ್ರಕಾರ ದಾವಾ ಆಸ್ತಿಗಳಿಗೆ ಮಾಲೀಕನಾಗಿರುತ್ತೇನೆ ಅಂತಾ ಠರಾಯಿಸಬೇಕು ಅಂತಾ ನಾನು ಕೇಳಿಕೊಂಡಿರುತ್ತೇನೆ ಅಂದರೆ ನಿಜ. ಅದೇ ಪ್ರಕಾರ ನಾನು ಪ್ರತಿವಾದಿಯರ ವಿರುದ್ಧ ತಾಕೀತಿ ಹುಕುಂವನ್ನು ಮಾಡಬೇಕು ಅಂತಾ ಕೇಳಿಕೊಂಡಿರುತ್ತೇನೆ ಅಂದರೆ ನಿಜ. ನಾನು ಮೇಲೆ ಹೇಳಿದ ಮಾಂಗನಿಗಳು ಕೇಳಿದ್ದು ದಾವಾ ಆಸ್ತಿಗಳಿಗೆ ಸಂಬಂಧಿಸಿದ್ದು ಇರುತ್ತದೆ. ಪ್ರತಿವಾದಿಯರು ಈ ದಾವೆವಳಗೆ ಸಲ್ಲಿಸಿರುವ ನಿಷಾನೆ ಡಿ-1 ರಿಂದ ನಿಷಾನೆ ಡಿ -17 ರವರೆಗೆ ಇರುವ ದಾಖಲೆಗಳನ್ನು ನಾನು ಪರಿಶೀಲನೆ ಮಾಡಿರುತ್ತೇನೆ. ನಿಡಿ-1 ರಿಂದ ನಿಡಿ-7 ರ ವರೆಗೆ ಇರುವ ದಾಖಲೆಗಳಲ್ಲಿ ಉಲ್ಲೇಖಿಸಿರುವಂತಹ ಆಸ್ತಿಗಳ ಸಂಖ್ಯೆಗಳು ಈ ದಾವೆವಳಗಿರುವ ದಾವಾ ಆಸ್ತಿಗಳಿಗೆ ಸಂಬಂಧಿಸಿದ್ದು ಇರುತ್ತದೆ ಅಂದರೆ ನಿಜ.

ಪ್ರತಿವಾದಿಯರು ಒಂದೊಂದು ದಾವಾ ಆಸ್ತಿಯ ಚದುರಡಿಗೆ ಎಷ್ಟು ಮೌಲ್ಯ ಇರುತ್ತದೆ ಅಂತಾ ತೋರಿಸುವ ಸಲುವಾಗಿ ಪ್ರಮಾಣ ಪತ್ರಗಳನ್ನು ಹಾಜರುಪಡಿಸಿರುತ್ತಾರೆಂದರೆ ನಿಜ. ನಿಡಿ-1 ರಿಂದ ನಿಡಿ-17 ರವರೆಗೆ ಇರುವಂತಹ ದಾಖಲೆಗಳ ಪ್ರಕಾರ ದಾವಾ ಆಸ್ತಿಗಳ ಒಟ್ಟು ಮೌಲ್ಯ 3,76,49,160/- ರೂ. ಆಗುತ್ತದೆ ಅಂತಾ ಹೇಳುವುದು ಸರಿಯಲ್ಲ. ಈ ದಾವೆವಳಗಿರುವ ದಾವಾ ಆಸ್ತಿಗಳಿಗೆ ಮಾರುಕಟ್ಟೆ ಬೆಲೆ ಎಷ್ಟು ಆಗುತ್ತದೆ ಅಂತಾ ನಿರ್ದಿಷ್ಟವಾಗಿ ತೋರಿಸಲು ನಾನು ಉಪನೊಂದಣಿ

ಅಧಿಕಾರಿ ಕೊಟ್ಟಿರುವ ದಾಖಲೆಗಳನ್ನು ಹಾಜರು ಪಾಡಿಸಿರುವುದಿಲ್ಲ ಅಂತಾ ಕೇಳಿದ ಪ್ರಶ್ನೆಗೆ ಸಾಕ್ಷಿಯು ನಾನು ಅವುಗಳನ್ನು ಹಾಜರು ಮಾಡಿರುತ್ತೇನೆ ಅಂತಾ ಹೇಳುತ್ತಾರೆ.

ನಿಡಿ-1 ರಿಂದ ನಿಡಿ-17 ರವರೆಗೆ ಇರುವಂತಹ ದಾಖಲೆಗಳು ದಾವಾ ಆಸ್ತಿಗಳ ಬೆಲೆ ದಾವಾವನ್ನು ದಾಖಲು ಮಾಡುವ ಕಾಲಕ್ಕೆ ಅವುಗಳ ಎಷ್ಟು ಬೆಲೆ ಇತ್ತು ಅಂತಾ ತೋರಿಸಲು ಹಾಜರು ಮಾಡಿರುವಂತಹ ದಾಖಲೆಗಳಾಗಿರುತ್ತವೆ ಅಂದರೆ ನಿಜ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿಗಳ ಒಟ್ಟು ಮಾರುಕಟ್ಟೆ ಬೆಲೆ ಎಷ್ಟು ಇರುತ್ತದೆ ಅಂತಾ ನಾನು ಹೇಳಿರುತ್ತೇನೆ. ಉಪನೊಂದಣಿ ಅಧಿಕಾರಿ ಕೊಟ್ಟಿರುವ ವ್ಯಾಲ್ಯುವೇಷನ್ ಸರ್ಟಿಫಿಕೇಟ ಪ್ರಕಾರ ದಾವಾ ಆಸ್ತಿಗಳ ಬೆಲೆ ಒಂದು ಕೋಟಿ ಆಗುತ್ತದೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಉಪನೊಂದಣಿ ಅಧಿಕಾರಿ ಕೊಟ್ಟಿರುವಂತಹ ಮೌಲ್ಯ ಮಾಪನ ಪ್ರಕಾರ ದಾವಾ ಆಸ್ತಿಗಳ ಒಟ್ಟು ಮಾರುಕಟ್ಟೆ ಬೆಲೆ ಎಷ್ಟು ಆಗುತ್ತದೆ ಅಂತಾ ನಾನು ಹೇಳಿರುವುದಿಲ್ಲ ಅಂದರೆ ಸರಿಯಲ್ಲ.

ನಾನು 3,76,49,160/- ರೂ. ಮೇಲೆ ನ್ಯಾಯಾಲಯದ ಶುಲ್ಕವನ್ನು ಕಟ್ಟಿ ನಾನು ಈ ದಾವೆಯನ್ನು ಮುಂದುವರೆಸಬೇಕಾಗುತ್ತದೆ ಅಂತಾ ಹೇಳುವುದು ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿಗಳ ಒಟ್ಟು ಮಾರುಕಟ್ಟೆ ಬೆಲೆ ಎಷ್ಟು ಇರುತ್ತದೆ ಅಂತಾ ಹೇಳದೇ ನಾನು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಈ ದಾವೆಯನ್ನು ದಾಖಲು ಮಾಡುವಾಗ ನಾನು ಕೇವಲ 50/- ರೂ. ನ್ಯಾಯಾಲಯದ ಶುಲ್ಕವನ್ನು ಕಟ್ಟಿರುತ್ತೇನೆಂದರೆ ನಿಜ. ನಾನು ದಾವಾದ ಮೌಲ್ಯಮಾಪನವನ್ನು ಸರಿಯಾಗಿ ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ನಾನು ನನ್ನ ಪ್ರಕಾರ ಕಟ್ಟಿರುವಂತಹ ನ್ಯಾಯಾಲಯದ ಶುಲ್ಕ ಸರಿ ಇರುವುದಿಲ್ಲ ಅಂದರೆ

ಸರಿಯಲ್ಲ. ನಾನು ದಾವೆಯ ಸರಿಯಾದ ಮೌಲ್ಯಮಾಪನವನ್ನು ಮಾಡದೇ ಇದ್ದರೂ ಸಹ ನಾನು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ፡ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿ ಇದೆ.**

**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು, ಗದಗ.**